# ಸಮಗ್ರ ಶಿಕ್ಷಣ-ಕರ್ನಾಟಕ

ರಾಜ್ಯ ಯೋಜನಾ ನಿರ್ದೇಶಕರು ಕಛೇರಿ, ಹೊಸ ಸಾರ್ವಜನಿಕ ಕಛೇರಿ
ಪೂರಕ ಕಟ್ಟಡಗಳು ಕೆ.ಆರ್.ಸರ್ಕಲ್, ನೃಪತುಂಗ ರಸ್ತೆ, ಬೆಂಗಳೂರು-560001

**ಸಂಖ್ಯೆ:** ಸಶಿಅ/ಒಒಎಸ್‌ಸಿ/ಇತರೆ/ 2018-19 ದಿನಾಂಕ: 17-08-2019

## ಜ್ಞಾಪನ

**ವಿಷಯ:** ಚೈಲ್ಡ್ ಲೈನ್ 1098 ನ್ನು ಮಕ್ಕಳ ರಕ್ಷಣೆಗೆ ದಿನದ 24 ಗಂಟೆಗಳಲ್ಲಿಯೂ ಚಾಲ್ತಿಯಲ್ಲಿರುವ ದೂರವಾಣಿಯ ಮಾಹಿತಿಯನ್ನು ಸಾರ್ವಜನಿಕರು/ವಿದ್ಯಾರ್ಥಿಗಳಿಗೆ ಮಾಹಿತಿಗಾಗಿ ಸೂಚನಾ ಫಲಕದಲ್ಲಿ ಪ್ರಕಟಿಸುವ ಬಗ್ಗೆ.

**ಉಲ್ಲೇಖ:** ಶ್ರೀಮತಿ ನಾಗಮಣಿ.ಸಿ.ಎನ್. ನಗರ ಸಂಘಟಕರು, ಚೈಲ್ಡ್ ಲೈನ್, ಬೆಂಗಳೂರು ಇವರ ಪತ್ರ ದಿನಾಂಕ 14-8-2019.

********

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಮಕ್ಕಳ ದೈಹಿಕ ಶೋಷಣೆ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳಿಂದ ಮಾನಸಿಕ ಸ್ಥೈರ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ. ಹಾಗೂ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ಆನೇಕ ಬಾರಿ ಮಕ್ಕಳು ತಮ್ಮ ಮೇಲೆ ಅಗುತ್ತಿರುವ ತೊಂದರೆಗಳ ಕುರಿತು ಯಾರಿಗೆ, ಹೇಗೆ ದೂರು ಕೊಡಬೇಕು ಎಂಬ ಬಗ್ಗೆ ಮಾಹಿತಿ ಇಲ್ಲದೆ ಮಾನಸಿಕವಾಗಿ ತೊಂದರೆಗೆ ಒಳಗಾಗುತ್ತಿದ್ದಾರೆ. ಮಕ್ಕಳು ದೈನಂದಿನ ಶಾಲಾ ವೇಳೆಯಲ್ಲಿ ಕ್ಷುಲ್ಲಕ ತಪ್ಪುಗಳನ್ನು ಮಾಡಿದಾಗ ಶಾಲೆಯಿಂದ ಹೊರಹಾಕುವ, ದೈಹಿಕವಾಗಿ ಥಳಿಸುವ ಶಿಕ್ಷೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ಆನೇಕ ಮಕ್ಕಳು ಶಾಲೆಯಿಂದ ಹೊರಗೆ ಉಳಿಯಲು ಸಹ ಕಾರಣವಾಗುತ್ತಿದೆ. 1992 ರಲ್ಲಿ ವಿಶ್ವ ಸಂಸ್ಥೆಯು ಮಕ್ಕಳ ಹಕ್ಕುಗಳ ಒಡಂಬಡಿಕೆಯ ಅಂತರಾಷ್ಟ್ರೀಯ ಕಾನೂನನ್ನು ಜಾರಿಗೆ ತಂದಿದ್ದು ಅದರಲ್ಲಿ ಮಕ್ಕಳ ರಕ್ಷಣೆ ಬಗ್ಗೆ ಒತ್ತು ನೀಡಲಾಗಿದ್ದರೂ ಕೂಡ ಮಕ್ಕಳ ಮೇಲಿನ ದೌರ್ಜನ್ಯ ಇನ್ನೂ ಕಡಿಮೆಯಾಗಿಲ್ಲ. ಅಲ್ಲದೆ ಪೋಷಣೆ ಅಗತ್ಯವಿರುವ, ಭಾಲಕಾರ್ಮಿಕರ, ಭಾಲ್ಯ ವಿವಾಹಕ್ಕೆ ಒಳಗಾಗಬಹುದಾದ ಹಾಗೂ ಒಳಗಾದ, ಕಾಣೆಯಾದ, ಶಾಲೆಯಿಂದ ಹೊರಗುಳಿದ, ಮಾದಕ ವ್ಯಸನಕ್ಕೆ ಒಳಗಾದ, ಲೈಂಗಿಕ ಶೋಷಣೆಗೆ ಗುರಿಯಾದವರು **ಮಕ್ಕಳ ಚೈಲ್ಡ್ ಲೈನ್ 1098** ನ್ನು ಸಂಪರ್ಕಿಸಿ ರಕ್ಷಣೆ ಪಡೆಯಬಹುದಾಗಿರುತ್ತದೆ.

ಈ ನಿಟ್ಟಿನಲ್ಲಿ ಮಕ್ಕಳ ರಕ್ಷಣೆಗಾಗಿ ಕರ್ತವ್ಯ ನಿರ್ವಹಿಸುತ್ತಿರುವ ಚೈಲ್ಡ್ ಲೈನ್ 1098 ಕುರಿತು ಸಾರ್ವಜನಿಕರು/ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದು ಅಗತ್ಯವಾಗಿರುತ್ತದೆ. ಈ ಸಂಬಂಧ ಚೈಲ್ಡ್ ಲೈನ್ 1098 ಈ ದೂರವಾಣಿ ಸಂಖ್ಯೆಯು ರಾಷ್ಟ್ರೀಯ ತುರ್ತು ದೂರವಾಣಿ ಸಂಖ್ಯೆ ಆಗಿದ್ದು ಮಕ್ಕಳ ಸಹಾಯಕ್ಕಾಗಿ ದಿನದ 24 ಗಂಟೆಗಳಲ್ಲಿಯೂ ಚಾಲ್ತಿಯಲ್ಲಿರುತ್ತದೆ. ಇದು ಭಾರತ ಸರ್ಕಾರದ ಪ್ರಮುಖ ಯೋಜನೆಯಾಗಿದ್ದು, ಈ ಯೋಜನೆಯ ಬಗ್ಗೆ ತಿಳುವಳಿಕೆಯನ್ನು ಮೂಡಿಸಬೇಕಾಗಿರುವುದು ಅಗತ್ಯವಾಗಿರುತ್ತದೆ. ಮಕ್ಕಳ ರಕ್ಷಣೆಯ ಸೂಕ್ತ ಮಾಹಿತಿಗಾಗಿ ಚೈಲ್ಡ್ ಲೈನ್ 1098 ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ರಾಜ್ಯ ಎಲ್ಲಾ ಶಾಲೆಗಳ ಸೂಚನಾ ಫಲಕದಲ್ಲಿ ಪ್ರಕಟಿಸಲು ಶಾಲೆಗಳಲ್ಲಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಸೂಚನಾ ಫಲಕವನ್ನು ಸಿದ್ದಪಡಿಸಿ, ವಿದ್ಯಾರ್ಥಿಗಳು/ಪೋಷಕರು/ಸಾರ್ವಜನಿಕರಿಗೆ ತಿಳಿಸುವಂತೆ ಸ್ಥಳಿಯ ಪತ್ರಿಕೆಗಳಲ್ಲಿ ಪ್ರಕಟಣೆಗೆ ಅಗತ್ಯ ಕ್ರಮಕೈಗೊಳ್ಳಲು ರಾಜ್ಯದ ಎಲ್ಲಾ ಉಪನಿರ್ದೇಶಕರು(ಆ) ಈ ಮೂಲಕ ಸೂಚಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ-ಕರ್ನಾಟಕ

**ಮುಂದಿನ ಕ್ರಮಕ್ಕಾಗಿ:**

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆ), ಸಾ.ಶಿ.ಇ.....ಜಿಲ್ಲೆ
2. ರಾಜ್ಯದ ಎಲ್ಲಾ ಉಪಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ,....ಜಿಲ್ಲೆ
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ.
4. ಶ್ರೀಮತಿ ನಾಗಮಣಿ, ನಗರ ಸಂಘಟಕರು, ಚೈಲ್ಡ್ ಲೈನ್, ಬೆಂಗಳೂರು.
5. ಕಛೇರಿ ಪ್ರತಿ.